(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:158/2014-15 ದಿನಾಂಕ:07.06.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಅಯುಕ್ತರು, ಹೊಸಪೇಟೆ.**

*******

**ವಾದಿಗಳು ಶ್ರೀ/ಶ್ರೀಮತಿ**

1] ಬಸಮ್ಮ ಗಂಡ ಫಕೀರಪ್ಪ,
2] ಲಲಿತಮ್ಮ ಗಂಡ ದಿ.ಅಶೋಕ,
3] ಕೇಣುಕಪ್ಪ ತಂದೆ ಫಕೀರಪ್ಪ,
ಪ್ರತಿವಾದಿ 1 ,2 ಮತ್ತು 3 ರ ವಾಸ:
ಹೂವಿನಹಡಗಲಿ ತಾಲೂಕು.
4] ರುದ್ರಪ್ಪ ತಂದೆ ದಿ.ಚಂದ್ರಪ್ಪ,
5] ವೀರಭದ್ರಪ್ಪ ತಂದೆ ದಿ.ಚಂದ್ರಪ್ಪ,
ಪ್ರತಿವಾದಿ 4 ಮತ್ತು 5 ರ ವಾಸ:
ಎತ್ತಿನಹಟ್ಟಿ ಗ್ರಾಮ, ಶಿರಹಟ್ಟಿ ತಾಲೂಕು,
ಗದಗ ಜಿಲ್ಲೆ.
6] ಚಂದ್ರಮ್ಮ ಗಂಡ ರುದ್ರಪ್ಪ,
7] ಸಿದ್ದಣ್ಣ ತಂದೆ ರುದ್ರಪ್ಪ,
8] ಬಸವರಾಜ ತಂದೆ ರುದ್ರಪ್ಪ,
ಪ್ರತಿವಾದಿ 6,7 ಮತ್ತು 8 ರ ವಾಸ:
ಹೂವಿನಹಡಗಲಿ ತಾಲೂಕು.
9] ಕೊಟ್ರೇಶ್ ತಂದೆ ರುದ್ರಪ್ಪ,
ವಾಸ: ಮಾಗಳ ಗ್ರಾಮ,
ಹೂವಿನಹಡಗಲಿ ತಾಲೂಕು.
[ಶ್ರೀ. ಹೆಚ್.ಬಡ್ಡಪ್ಪ, ವಕೀಲರು, ಹೊಸಪೇಟೆ.]

**ಪ್ರತಿವಾದಿಗಳು ಶ್ರೀ/ಶ್ರೀಮತಿ**

1] ಕಂಚಗೇರಿ ಬಸಪ್ಪ ತಂದೆ ಶಾಂತಪ್ಪ,
ವಾಸ: ರೆಡ್ಡಿ ರಸ್ತೆ, ಮಾಗಳ ಗ್ರಾಮ,
ಹೂವಿನಹಡಗಲಿ ತಾಲೂಕು.
**[ಶ್ರೀ. ಕಡ್ಲಬಾಳ್ ಮೋಹನ್, ವಕೀಲರು, ಹೊಸಪೇಟೆ.]**
2] ತಹಶೀಲ್ದಾರರು, ಹೂವಿನಹಡಗಲಿ.

* * * * *

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಕಲಂ 58 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕಛೇರಿಯ ಅಪೀಲು ಆದೇಶ ಸಮ ಸಂಖ್ಯೆ ದಿನಾಂಕ:28.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾದ ಆದೇಶದಲ್ಲಿ ಆಕಸ್ಮಿಕ ಚೆರಳ್ಚಿನಿಂದಾಗಿರುವ ಲೋಪದೋಷಗಳನ್ನು ತಿದ್ದುಪಡಿ ಮಾಡಿ ಈ ಕೆಳಕಂಡಂತೆ

## ತಿದ್ದುಪಡಿ ಆದೇಶ

ದಿನಾಂಕ:28.04.2016 ರಲ್ಲಿನ ಆದೇಶದಲ್ಲಿ ಹಡಗಲಿ ತಾಲೂಕು ಹಡಗಲಿ ಹೋಬಳಿ ಮಾಗಳ ಗ್ರಾಮದ ಸ.ನಂ.177/ಬಿ ವಿಸ್ತೀರ್ಣ:04 ಎಕರೆ 52 ಸೆಂಟ್ಸ್ ಜಮೀನನ್ನು ವಾದಿ-2, 3, 7, 8 ಹಾಗೂ 9 ರವರ ಹೆಸರಲ್ಲಿ ರಾಜಿ ಪತ್ರದಂತೆ ಹಕ್ಕು ಬದಲಾವಣೆ ಮಾಡಲು ಎಂದು ದಾಖಲಿಸಿರುವುದನ್ನು ಇದೀಗ ಸರಿಪಡಿಸುತ್ತಾ, **ವಾದಿ-2, 5, 8 ಹಾಗೂ 9 ರವರ ಹೆಸರಲ್ಲಿ ರಾಜಿ ಪತ್ರದಂತೆ ಹಕ್ಕು ಬದಲಾವಣೆ ಮಾಡಲು ಎಂದು ತಿದ್ದುಪಡಿ** ಮಾಡಿಕೊಂಡು ಓದಿಕೊಳ್ಳಲು ಆದೇಶಿಸಿದೆ.

[ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು
ಹೊಸಪೇಟೆ

1] ವಾದಿ ಮತ್ತು ಪ್ರತಿವಾದಿಗಳಿಗೆ
2] ಪ್ರತಿಯನ್ನು:- ತಹಶೀಲ್ದಾರರು, ಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:158/2014-15

ದಿನಾಂಕ:28.04.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

*******

**ವಾದಿಗಳು: ಶ್ರೀ/ಶ್ರೀಮತಿ**

1] ಬಸಮ್ಮ ಗಂಡ ಫಕೀರಪ್ಪ,
2] ಲಲಿತಮ್ಮ ಗಂಡ ದಿ.ಅಶೋಕ,
3] ಕೇಣುಕಪ್ಪ ತಂದೆ ಫಕೀರಪ್ಪ,
**ಪ್ರತಿವಾದಿ 1 ,2 ಮತ್ತು 3 ರ ವಾಸ:**
ಹೂವಿನಹಡಗಲಿ ತಾಲೂಕು.
4] ರುದ್ರಪ್ಪ ತಂದೆ ದಿ.ಚಂದ್ರಪ್ಪ,
5] ವೀರಭದ್ರಪ್ಪ ತಂದೆ ದಿ.ಚಂದ್ರಪ್ಪ,
**ಪ್ರತಿವಾದಿ 4 ಮತ್ತು 5 ರ ವಾಸ:**
ಎತ್ತಿನಹಟ್ಟಿ ಗ್ರಾಮ, ಶಿರಹಟ್ಟಿ ತಾಲೂಕು,
ಗದಗಜಿಲ್ಲೆ.
6] ಚಂದ್ರಮ್ಮ ಗಂಡ ರುದ್ರಪ್ಪ,
7] ಸಿದ್ದಣ್ಣ ತಂದೆ ರುದ್ರಪ್ಪ,
8] ಬಸವರಾಜ ತಂದೆ ರುದ್ರಪ್ಪ,
**ಪ್ರತಿವಾದಿ 6,7 ಮತ್ತು 8 ರ ವಾಸ:**
ಹೂವಿನಹಡಗಲಿ ತಾಲೂಕು.
9] ಕೊಟ್ರೇಶ್ ತಂದೆ ರುದ್ರಪ್ಪ,
**ವಾಸ:** ಮಾಗಳ ಗ್ರಾಮ,
ಹೂವಿನಹಡಗಲಿ ತಾಲೂಕು.
**[ಶ್ರೀ. ಹೆಚ್.ಬಿಡ್ಡಪ್ಪ, ವಕೀಲರು, ಹೊಸಪೇಟೆ.]**

**ಪ್ರತಿವಾದಿಗಳು: ಶ್ರೀ/ಶ್ರೀಮತಿ**

1] ಕಂಚಗೇರಿ ಬಸಪ್ಪ ತಂದೆ ಶಾಂತಪ್ಪ,
**ವಾಸ:** ರೆಡ್ಡಿ ರಸ್ತೆ, ಮಾಗಳ ಗ್ರಾಮ,
ಹೂವಿನಹಡಗಲಿ ತಾಲೂಕು.
**[ಶ್ರೀ. ಕಲ್ಲಬಾಳ್ ಮೋಹನ್, ವಕೀಲರು, ಹೊಸಪೇಟೆ.]**
2] ತಹಶೀಲ್ದಾರರು, ಹೂವಿನಹಡಗಲಿ.

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಡಗಲಿ | ಹಡಗಲಿ | ಮಾಗಳ | 177/ಬಿ | 04ಎಕರೆ52 ಸೆಂಟ್ಸ್ |

**ಪೀಠಿಕೆ:**

ಹಡಗಲಿ ತಾಲೂಕು ಹಡಗಲಿ ಹೋಬಳಿ ಮಾಗಳ ಗ್ರಾಮದ ಸ.ನಂ.177/ಬಿ ವಿಸ್ತೀರ್ಣ:04ಎಕರೆ 52 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹಡಗಲಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:376/2009-10 ದಿನಾಂಕ:05.08.2010 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ಮತ್ತು ಸದರಿ ಕಾಯ್ದೆಯ ಕಲಂ 55 ರಡಿಯಲ್ಲಿ ಪ್ರಶ್ನಿತ ಆದೇಶಕ್ಕೆ ಪ್ರಕರಣ ಇತ್ಯರ್ಥವಾಗುವವರೆಗೆ ತಡೆಯಾಜ್ಞೆಯನ್ನು ಕೋರಿ ಮನವಿಯನ್ನು ಮತ್ತು ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಲು ಕೋರಿ ಕಾಲಮಿತಿ ಕಾಯ್ದೆಯ ಕಲಂ 5 ರಡಿಯಲ್ಲಿ ವಾದಿಪರ ವಕೀಲರು ದಿನಾಂಕ: 10.10.2014 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಿ, ಹಾಗೂ ಸದರಿ ಪ್ರಶ್ನಿತ ಆದೇಶಕ್ಕೆ ಮುಂದಿನ ವಿಚಾರಣೆ ದಿನಾಂಕದರವರೆಗೆ ಮಾತ್ರ ತಡೆಯಾಜ್ಞೆಯನ್ನು ನೀಡಿ, ನೈಸರ್ಗಿಕ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:11.11.2014 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆದರೆ, ವಾದಿಗಳು ಮತ್ತು ಪ್ರತಿವಾದಿಗಳು ದಿನಾಂಕ:15.03.2016 ರಂದು ವಿಚಾರಣೆ ಸಂದರ್ಭದಲ್ಲಿ ಹಾಜರಾಗಿ, ತಮ್ಮ ವಕೀಲರುಗಳ ಮುಖಾಂತರ ದಿನಾಂಕ:10.12.2015 ರಂದುತೆರೆದ ನ್ಯಾಯಾಲಯದಲ್ಲಿ ಉಭಯ ಪಕ್ಷಗಾರರು ರಾಜಿ ಮಾಡಿಕೊಂಡ ರಾಜಿ ಪತ್ರ ಸಲ್ಲಿಸಿದ್ದು, ಸದರಿ ರಾಜಿ ಪತ್ರದಂತೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಉಭಯ ಪಕ್ಷಗಾರರು ಸಲ್ಲಿಸಿದ ರಾಜಿ ಪತ್ರದಲ್ಲಿ ಪ್ರತಿವಾದಿ-1 ರವರು ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಪ್ರಶ್ನಿತ ಆದೇಶವನ್ನು ರದ್ದುಪಡಿಸಲು ಕೋರುತ್ತಾ, ಸದರಿ ವ್ಯಾಜ್ಯದ ಜಮೀನನ್ನು ವಾದಿ-2, 3, 7, 8 ಹಾಗೂ 9 ರವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಪ್ರತಿವಾದಿ-2 ರವರಿಗೆ ನಿರ್ದೇಶನ ನೀಡಲು ಕೋರಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಉಭಯ ಪಕ್ಷಗಾರರು ಸಲ್ಲಿಸಿರುವ ರಾಜಿ ಪತ್ರ ಪತ್ರದಂತೆ ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಪ್ರಶ್ನಿತ ಆದೇಶವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನನ್ನು ವಾದಿ-2, 3, 7, 8 ಹಾಗೂ 9 ರವರ ಹೆಸರಿನಲ್ಲಿ ರಾಜಿ ಪತ್ರದಂತೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಅಪೀಲನ್ನು ಅಂಗೀಕರಿಸುತ್ತಾ, ಹಡಗಲಿ ತಾಲೂಕು ಹಡಗಲಿ ಹೋಬಳಿ ಮಾಗಳ ಗ್ರಾಮದ ಸ.ನಂ.177/ಬಿ ವಿಸ್ತೀರ್ಣ:04 ಎಕರೆ 52 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹಡಗಲಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:376/2009-10 ದಿನಾಂಕ:05.08.2010 ವನ್ನು ರದ್ದುಪಡಿಸುತ್ತಾ, ಉಭಯ ಪಕ್ಷಗಾರರು ಸಲ್ಲಿಸಿರುವ ರಾಜಿ ಪತ್ರ ಪತ್ರದಂತೆ ಸದರಿ ವ್ಯಾಜ್ಯದ ಜಮೀನನ್ನು ವಾದಿ-2, 3, 7, 8 ಹಾಗೂ 9 ರವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹಡಗಲಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:28.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ

ಪ್ರತಿಯನ್ನು:- ತಹಶೀಲ್ದಾರರು, ಹಡಗಲಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.